# ವಿಧಾನ ಪರಿಷತ್ತಲ್ಲೂ ಮೊಬೈಲ್ ನಿಷೇಧ

## ರಾಥೋಡ್ ವಿವಾದ ಬೆನ್ನಲ್ಲೇ ಸಭಾಪತಿ ಆದೇಶ

● ಕನ್ನಡಪ್ರಭ ವಾರ್ತೆ ವಿಧಾನ ಪರಿಷತ್ತು



ವಿಧಾನಸಭೆಯಲ್ಲಿ ಮೊಬೈಲ್ ಬಳಕೆ ನಿಷೇಧಿಸಿದ 6 ವರ್ಷ ಬಳಿಕ ಇದೀಗ ವಿಧಾನಪರಿಷತ್ತಲ್ಲೂ ಮೊಬೈಲ್ ಬಳಕೆಗೆ ಸಭಾಪತಿ ಕೆ. ಪ್ರತಾಪ್‌ಚಂದ್ರ ಶೆಟ್ಟಿ ನಿಷೇಧ ಹೇರಿದ್ದಾರೆ.

**ಕಡೇ ಎಚ್ಚರಿಕೆ:** ಪ್ರಕಟಣೆ ಮೂಲಕ ಸದನಕ್ಕೆ ಮಾಹಿತಿ ನೀಡಿದ ಸಭಾಪತಿ ಪ್ರತಾಪಚಂದ್ರ ಶೆಟ್ಟಿ 2011ರ ಜೂನ್ 3ರಲ್ಲಿ ಮೊಬೈಲ್ ಬಳಕೆ ಮಾಡಬಾರದು ಎಂದು ಆದೇಶವಾಗಿತ್ತು. ಆದರೆ ಸದನದೊಳಗೆ ಈಗಲೂ ಮೊಬೈಲ್‌ಗಳು ರಿಂಗಣಿಸುತ್ತಿವೆ. ಇದು ಕಡೇ ಎಚ್ಚರಿಕೆ. ಇನ್ನು ಮುಂದೆ ಸದನದೊಳಗೆ ಮೊಬೈಲ್ ತರುವಂತಿಲ್ಲ. ತಂದರೆ ಸೂಕ್ತ ಕ್ರಮ ಜರುಗಿಸಲಾಗುವುದು. ಮೊಬೈಲ್ ತಂದ್ರೆ ಸ್ವಿಚ್ ಆಫ್ ಮಾಡಬೇಕು. ಮಾಹಿತಿಗಾಗಿ ಮೊಬೈಲ್ ತರುವುದಾದರೆ ಸಭಾಪತಿ ಅವರಿಂದ ಅನುಮತಿ ಪಡೆಯಬೇಕು ಎಂದು ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

**6 ವರ್ಷ ಹಿಂದೆ:** 2012ರಲ್ಲಿ ವಿಧಾನಸಭೆ ಕಲಾಪ ಸಂದರ್ಭದಲ್ಲಿ ಅಶ್ಲೀಲ ಚಿತ್ರ ವೀಕ್ಷಿಸಿದ ಪ್ರಕರಣದ ತನಿಖೆ ನಡೆಸಿದ್ದ ಸದನ ಸಮಿತಿ ಮೊಬೈಲ್ ಬಳಕೆ ನಿಷೇಧಕ್ಕೆ ಶಿಫಾರಸು ಮಾಡಿತ್ತು. ಅಲ್ಲದೆ, 2014ರ ಡಿಸೆಂಬರ್‌ನಲ್ಲಿ ಬಿಜೆಪಿಯ ಶಾಸಕರೊಬ್ಬರು ಪ್ರಿಯಾಂಕ ಗಾಂಧಿ ಚಿತ್ರವನ್ನು ಅಸಭ್ಯವಾಗಿ ವೀಕ್ಷಿಸುತ್ತಿದ್ದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ವಿಧಾನಸಭೆಯ ಅಂದಿನ ಸ್ಪೀಕರ್ ಕಾಗೋಡು ತಿಮ್ಮಪ್ಪ ಅದೇ ದಿನ ವಿಧಾನಸಭೆಯಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸಿದ್ದರು.

● 12

# ವಿಧಾನ ಪರಿಷತ್ತಲ್ಲೂ ಮೊಬೈಲ್ ನಿಷೇಧ: ಸ್ಪೀಕರ್ ನಿರ್ದೇಶನ

● ಮೊದಲ ಪುಟದಿಂದ

ಜ.29ರಂದು ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಪ್ರಶ್ನೋತ್ತರ ಅವಧಿ ಸಂದರ್ಭದಲ್ಲಿ



ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೋಗಳನ್ನು ವೀಕ್ಷಣೆ ಮಾಡುತ್ತಿದ್ದರು ಎನ್ನಲಾದ ದೃಶ್ಯ ಖಾಸಗಿ ಸುದ್ದಿ ವಾಹಿನಿಗಳ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆದರೆ, ಪ್ರಕಾಶ್ ರಾಥೋಡ್, ವಿಡಿಯೋ ವೀಕ್ಷಣೆ ನಿರಾಕರಿಸಿದ್ದು ಮೆಮೊರಿ ಫುಲ್ ಆಗಿದ್ದರಿಂದ ಡಿಲೀಟ್ ಮಾಡುತ್ತಿದ್ದೆ ಎಂದು ಅವರು ಸ್ಪಷ್ಟನೆ ನೀಡಿದ್ದರು.